# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1222 |
| ಸದಸ್ಯರ ಹೆಸರು | : | ಡಾ\|\| ಎಂ.ಜಿ ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಶಿವಸೃಷ್ಟಿ ನಿರ್ಮಾಣಕ್ಕೆ ಸರ್ಕಾರದಿಂದ ಮಂಜೂರಾಗಿದ್ದ 10 ಕೋಟಿ ರೂಪಾಯಿಗಳನ್ನು ಹಿಂಪಡೆದಿರುವುದಕ್ಕೆ ಕಾರಣ ಏನು; | ಸರ್ಕಾರದ ಪತ್ರ ಸಂಖ್ಯೆ: ನಅಇ 328 ಎಸ್.ಎಫ್.ಸಿ 2020, ದಿನಾಂಕ:13-11-2020 ರಲ್ಲಿ ಬಸವಕಲ್ಯಾಣ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪಾರ್ಕ್ ನಿರ್ಮಾಣ ಮತ್ತು ಪುತ್ಥಳಿ ಸ್ಥಾಪನೆ ಮಾಡಲು ರೂ.10.00 ಕೋಟಿ ಎಸ್.ಎಫ್.ಸಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳಿಸಲು ಅಗತ್ಯ ಕ್ರಮವಹಿಸಲು ಸೂಚಿಸಲಾಗಿರುತ್ತದೆ.<br><br>ಸರ್ಕಾರದ ಪತ್ರ ಸಂಖ್ಯೆ:ನಅಇ 55 ಎಸ್ಎಫ್‌ಸಿ 2023(ಭಾಗ-2) ದಿನಾಂಕ:21-12-2024 ರಲ್ಲಿ ಬಸವಕಲ್ಯಾಣ ನಗರಸಭೆಗೆ 2020-21ನೇ ಸಾಲಿನ ಎಸ್.ಎಫ್.ಸಿ ವಿಶೇಷ ಅನುದಾನದಡಿ ಮಂಜೂರು ಮಾಡಲಾಗಿರುವ ರೂ.10.00 ಕೋಟಿ ಅನುದಾನವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿರುತ್ತದೆ. |
| ಆ) | ಬಸವಕಲ್ಯಾಣ ನಗರದಲ್ಲಿ ಶಿವಾಜಿ ಪಾರ್ಕ್, ಪುತ್ಥಳಿ ಸ್ಥಾಪನೆ ಹಾಗೂ ಶಿಲ್ಪಗಳು ಸೇರಿದಂತೆ ಶಿವಸೃಷ್ಟಿ ನಿರ್ಮಾಣ ಮಾಡಲು ಕಾಮಗಾರಿ ನಡೆಯುವ ಹಂತದಲ್ಲಿ ಹಿಂಪಡೆದಿರುವುದರಿಂದ ಮರಾಠ ಸಮಾಜದವರಿಗೆ ಮತ್ತು ಶ್ರೀ ಛತ್ರಪತಿ ಶಿವಾಜಿ ಮಹಾರಾಜರಿಗೆ ಅಗೌರವ ತೋರಿಸಿದಂತಾಗುವುದಿಲ್ಲವೆ; | ಬಸವಕಲ್ಯಾಣ ನಗರದ ಸರ್ವೆ ನಂ. 141/*/1 ರಲ್ಲಿ ಒಟ್ಟು ವಿಸ್ತೀರ್ಣ 163 ಎಕರೆ 2 ಗುಂಟೆ ಜಮೀನಿನ ಪೈಕಿ 10 ಎಕರೆ ಜಮೀನು ಬಸವಕಲ್ಯಾಣ ನಗರಸಭೆಗೆ ಉದ್ಯಾನವನ ನಿರ್ಮಿಸಲು ಮಂಜೂರಾದ ರೂ.10.00 ಕೋಟಿ ಎಸ್.ಎಫ್.ಸಿ ವಿಶೇಷ ಅನುದಾನಕ್ಕೆ ಮಾನ್ಯ ಶಾಸಕರು ಬಸವಕಲ್ಯಾಣ ಇವರ ದಿನಾಂಕ: 04/11/2024 ರ ಪತ್ರ ಮತ್ತು ಆಡಳಿತಾಧಿಕಾರಿ ಹಾಗೂ ಜಿಲ್ಲಾಧಿಕಾರಿ, ಬೀದರ ಇವರ ನಡುವಳಿ ಠರಾವು ಸಂಖ್ಯೆ:48 ದಿನಾಂಕ:11/11/2024ರನ್ವಯ ಕ್ರಿಯಾಯೋಜನೆ ತಯಾರಿಸಿ ಜಿಲ್ಲಾಧಿಕಾರಿ, ಬೀದರ ರವರಿಗೆ ದಿನಾಂಕ:12/11/2024 ರಂದು ಕ್ರಿಯಾಯೋಜನೆಗೆ ಅನುಮೋದನೆ ನೀಡಲು ಮತ್ತು ಸದರಿ ಪಾರ್ಕ ನಿರ್ಮಾಣ ಮಾಡಲು ರೂ.10.00 ಕೋಟಿಗಳನ್ನ ಬಿಡುಗಡೆ ಮಾಡುವಂತೆ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡುವಂತೆ ಕೋರಲಾಗಿರುತ್ತದೆ.<br><br>ಆದರೆ, ಕ್ರಿಯಾಯೋಜನೆ ಅನುಮೋದನೆಯಾಗುವ ಮುನ್ನವೆ ಅನುದಾನ ಹಿಂಪಡೆದು ಬೇರೆ ನಗರ ಸ್ಥಳೀಯ ಸಂಸ್ಥೆಗಳಿಗೆ |

| | | |
|---|---|---|
| | | ಮರುಹಂಚಿಕೆ ಮಾಡಿರುವುದರಿಂದ ಕ್ರಿಯಾಯೋಜನೆ ಅನುಮೋದನೆ ಆಗಿರುವುದಿಲ್ಲ. |
| ಇ) | ಈಗಾಗಲೇ ಸರ್ಕಾರದಿಂದ ಮಂಜೂರಾಗಿ ಬಿಡುಗಡೆಯಾಗಿದ್ದ 10 ಕೋಟಿ ರೂಪಾಯಿ ಹಣವನ್ನು ಭರಿಸಿ ಶಿವಸೃಷ್ಟಿ ನಿರ್ಮಾಣ ಕಾಮಗಾರಿಗಳು ಸುಸೂತ್ರವಾಗಿ ನಡೆಯುವಂತೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ? | ಬಸವಕಲ್ಯಾಣ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪಾರ್ಕ್ ನಿರ್ಮಾಣ ಮತ್ತು ಪುತ್ಥಳಿ ಸ್ಥಾಪನೆ ಕುರಿತು ಹೊಸದಾಗಿ ಪ್ರಸ್ತಾವನೆ ಸ್ವೀಕೃತವಾದಲ್ಲಿ ಆರ್ಥಿಕ ಇಲಾಖೆಯ ಸಹಮತಿಯನ್ವಯ ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದು. |

ಸಂಖ್ಯೆ: ನಅಇ 87 ಎಸ್‌ಎಫ್‌ಸಿ 2025

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು.